# ಸ್ವಾಮಿ ಪ್ರಭವಾನಂದ (೧೮೯೩ - ೧೯೭೬)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೨**

### ಸ್ವಾಮಿ ಪ್ರೇಮಾನಂದರ ಸ್ಮೃತಿ :

ನಾನು ಬೇಲೂರು ಮಠವನ್ನು ಸೇರಿದ ಕೆಲವೇ ದಿನಗಳಲ್ಲಿ ಸ್ವಾಮಿ ಪ್ರೇಮಾನಂದರು ತರುಣ ಸಂನ್ಯಾಸಿಯೊಬ್ಬರನ್ನು ಕಠೋರ ವಾಗಿ ಖಂಡಿಸುತ್ತಿದ್ದುದನ್ನು ನೋಡಿದೆ. ನಾನು ಮನಸ್ಸಿನಲ್ಲೆ, 'ಅಯ್ಯೋ! ಇಂತಹ ಸಾಧುಗಳೂ ಕ್ರೋಧಿತರಾಗುತ್ತಾರೆಯೆ?' ಎಂದುಕೊಳ್ಳುತ್ತಿದ್ದೆ. ಸ್ವಾಮಿ ಪ್ರೇಮಾನಂದರು ಹಠಾತ್ತಾನೆ ನನ್ನ ಕಡೆಗೆ ತಿರುಗಿ ಮುಗುಳ್ನಕ್ಕರು. ಅವರ ಈ ಕೋಪವು ನಿಜವಾದ ಕೋಪವಲ್ಲ, ನಮಗೆ ಪಾಠ ಕಲಿಸಲೆಂದೇ ಈ ಸೋಗು ಎಂಬುದು ನನಗೆ ಅರ್ಥವಾಯಿತು. ಅಂದಿನಿಂದ, ನನಗೇನಾದರೂ ಅವರು ಬೈದರೆ, ನಾನು ವಿಚಲಿತನಾಗುತ್ತಿರಲಿಲ್ಲ. ಅವರ ಕಟುನುಡಿಗಳು ನನಗೆ ಅದ್ಭುತ ಸ್ಫೂರ್ತಿಯನ್ನು ನೀಡುತ್ತಿದ್ದು ಅವುಗಳನ್ನು ಆಶೀರ್ವಾದವೆಂದೇ ಭಾವಿಸುತ್ತಿದ್ದೆ.

೧೯೧೮ರ ಅಕ್ಟೋಬರ್ ತಿಂಗಳಲ್ಲಿ ವಾರಾಣಸಿಯಲ್ಲಿ ನಡೆದ ಘಟನೆ. ಅವರು ಅಲ್ಲಿದ್ದಾಗ ಗಂಗಾಸ್ನಾನ ಮಾಡಿ ವಿಶ್ವನಾಥ ಹಾಗೂ ಅನ್ನಪೂರ್ಣಾದೇವಿಯ ದರ್ಶನವನ್ನು ಮಾಡುತ್ತಿದ್ದರು. ನಾನಾಗ ಅವರೊಂದಿಗಿರುತ್ತಿದ್ದೆ. ಒಂದು ದಿನ ಭಗವತಿ ಅನ್ನ ಪೂರ್ಣೆಯ ಮಂದಿರದಲ್ಲಿ ನಮ್ಮ ಪೂಜೆ ಮುಗಿದಾಗ ಹಿರಿಯ ಪುರೋಹಿತರು ಸ್ವಾಮಿ ಪ್ರೇಮಾನಂದರ ಕೊರಳಿಗೆ ಒಂದು ಚೆಂಡುಹೂವಿನ ಮಾಲೆಯನ್ನು ತೊಡಿಸಿದರು. ಮಹಾರಾಜರು ಅದನ್ನು ತಮ್ಮ ಕೊರಳಿನಿಂದ ತೆಗೆದು ನನಗೆ ಕೊಡಲು ಮುಂದಾದಾಗ ನಾನೆಂದೆ, ''ಮಹಾರಾಜ್, ತೆಗೆಯಬೇಡಿ. ಮಾಲೆ ನಿಮ್ಮ ಕೊರಳಿನಲ್ಲೆ ಇರಲಿ. ನಿಮ್ಮ ಮೇಲೆ ಎಷ್ಟು ಸುಂದರವಾಗಿ ಕಾಣುತ್ತಿದೆ!'' 'ಸುಂದರ' ಎಂಬ ಶಬ್ದದಿಂದ ಅವರ ಮನಸ್ಸಿನಲ್ಲಿ ಜಗತ್ತಿನ ಸೌಂದರ್ಯದ ಉದ್ದೀಪನೆಯಾಗಿ ಅವರು ಸಮಾಧಿಸ್ಥರಾದರು. ಅವರ ಮುಖಮಂಡಲವು ಉದ್ಭಾಸಿತವಾಗಿ ಅವರ ಶರೀರದಿಂದ ದಿವ್ಯಜ್ಯೋತಿಯೊಂದು ಹೊರಹೊಮ್ಮಿತು. ಅವರು ನಿಧಾನವಾಗಿ ಮಂದಿರದ ಹೊರಗೆ ಬಂದರು. ನಾನು ಅವರನ್ನು ಅನುಸರಿಸಿದೆ. ದೇವಸ್ಥಾನದ ಗಲ್ಲಿಯಲ್ಲಿ ಮೊದಲಿನಂತೆಯೆ ಜನಸಂದಣಿಯಿತ್ತು; ರಸ್ತೆಯ ಇಬ್ಬದಿಯಲ್ಲಿದ್ದ ಜನರು ಅವರನ್ನೆ ದೃಷ್ಟಿಸುತ್ತ ಅವರಿಗಾಗಿ ದಾರಿ ಬಿಟ್ಟುಕೊಟ್ಟರು. ಅವರು ಮಹಾರಾಜರ ಉಜ್ವಲ ಮೂರ್ತಿಯನ್ನು ಕಂಡಿದ್ದರೆಂಬುದು ಖಂಡಿತ. ವಾರಣಾಸಿಯ ರಸ್ತೆಯಲ್ಲಿ ನಾವು ಮುಂದುವರಿದಾಗಲೂ ಜನರು ನಿಶ್ಶಬ್ದವಾಗಿ ಸ್ವಾಮಿ ಪ್ರೇಮಾನಂದರನ್ನು ನೋಡುತ್ತ ನಿಂತರು. ಅವರು ಭಗವತ್ ಚಿಂತನೆಯಲ್ಲಿ ಸಂಪೂರ್ಣವಾಗಿ ತಲ್ಲೀನರಾಗಿದ್ದರು ಹೊರಗಿನ ಜಗತ್ತನ್ನು ಸಂಪೂರ್ಣವಾಗಿ ಮರೆತಿದ್ದರು. ನಾವು ಮಠದ ಹೊರಗಿನ ಗೇಟಿನ ಹತ್ತಿರ ತಲುಪಿದಾಗ ವರಾಂಡದಿಂದಲೆ ನಮ್ಮನ್ನು ಕಂಡ ಮಠಾಧ್ಯಕ್ಷರಾಗಿದ್ದ ಸ್ವಾಮಿ ನಿರ್ಭರಾನಂದರು ಪ್ರೇಮಾನಂದರಿಗೆ ವಿಶೇಷ ಸ್ವಾಗತವನ್ನು ಕೋರಲು ಅಣಿಯಾದರು. ನಾವು ಮಠದ ಅಂಗಳಕ್ಕೆ ಕಾಲಿರಿಸುತ್ತಲೆ ಗಂಟೆ, ಶಂಖ, ಜಾಗಟೆ ಮುಂತಾದವುಗಳ ಮಂಗಳ ಧ್ವನಿ ಎಲ್ಲೆಡೆಯೂ ಮುಖರಿತವಾಯಿತು. ವರಾಂಡದ ಕೆಳಗೆ ಬಂದು ಸೇರಿದಾಗ ಸ್ವಾಮಿ ಪ್ರೇಮಾನಂದರು ಮಾಲೆಯನ್ನು ತೆಗೆದು ಮಠಾಧ್ಯಕ್ಷರ ಕೊರಳಿಗೆ ತೊಡಿಸಿಬಿಟ್ಟರು. ಸ್ವಲ್ಪ ಸಮಯ ಮಹಾರಾಜರು ಭಾವಾನಂದದಿಂದ ನರ್ತಿಸಿದರು. ನಿಧಾನವಾಗಿ ಈ ಭಾವವು ಸ್ತಿಮಿತಗೊಂಡಿತು; ಆ ದಿವ್ಯಜ್ಯೋತಿಯೂ ಲುಪ್ತ ವಾಯಿತು.




ಸ್ವಾಮಿ ಪ್ರೇಮಾನಂದರು

'ಜವಾಹರಿಯು ರತ್ನವನ್ನು ಗುರುತಿಸಬಲ್ಲ' ಎನ್ನುತ್ತಾರೆ. ಅದೇ ರೀತಿ ಪ್ರಬುದ್ಧನಾದವನೇ ಪ್ರಬುದ್ಧ ವ್ಯಕ್ತಿಯನ್ನು ಗುರುತಿಸಿ ಆದರಿಸಬಲ್ಲ. ಶ್ರೀ ರಾಮಕೃಷ್ಣರ ಶಿಷ್ಯರ ಪರಸ್ಪರ ಅಗಾಧ ಪ್ರೀತಿ-ಪ್ರೇಮಗಳೇ ಇದಕ್ಕೆ ಪ್ರಮಾಣ.

ಸ್ವಾಮಿ ತುರೀಯಾನಂದ ಹಾಗೂ ಸ್ವಾಮಿ ಪ್ರೇಮಾನಂದರು ಕೆಲವು ವರ್ಷಗಳ ಬಳಿಕ ಒಬ್ಬರನ್ನೊಬ್ಬರು ಕಂಡಾಗ, ಪರಸ್ಪರ ಸಾಷ್ಟಾಂಗ ಪ್ರಣಾಮವನ್ನು ಮಾಡಿದರು. ಮೊದಲು ಮೇಲೆದ್ದ ಸ್ವಾಮಿ ತುರೀಯಾನಂದರು, ''ಸೋದರ, ವಿನಯವಂತಿಕೆಯಲ್ಲಿ ನಿನ್ನನ್ನು ಮೀರಿಸುವವರು ಯಾರೂ ಇಲ್ಲ'' ಎಂದರು.

ಒಂದು ದಿನ ನನ್ನೆದುರಿನಲ್ಲೇ ಸ್ವಾಮಿ ಪ್ರೇಮಾನಂದರು ಸ್ವಾಮಿ ಬ್ರಹ್ಮಾನಂದರಿಗೆ ಹೇಳಿದರು, ''ನಾವು ಈ ಕಾವಿ ವಸ್ತ್ರದಿಂದ ಬಿಡಿಸಿಕೊಳ್ಳೋಣ ಬಾ. ಇದು ನಮ್ಮ ಸಂನ್ಯಾಸದ ವಿಜ್ಞಾಪನೆಯನ್ನು ಮಾಡುತ್ತದೆ.'' ಸಂಸ್ಕಾರ ಪ್ರಸಿದ್ಧ ಸಂನ್ಯಾಸಾಶ್ರಮದ ಪ್ರತೀಕವಾದ ಗೈರಿಕ ವಸ್ತ್ರವೂ ಪೂರ್ಣ ಆತ್ಮ ವಿಲುಪ್ತಿಯ ಪಥದಲ್ಲಿ ಬಾಧಕವೆನ್ನುವಷ್ಟು ವೈರಾಗ್ಯದ ಉಚ್ಚ ಭಾವವನ್ನು ಅವರು ತಳೆದಿದ್ದರು.



ಸ್ವಾಮಿ ಬ್ರಹ್ಮಾನಂದರು

ಸ್ವಾಮಿ ಬ್ರಹ್ಮಾನಂದರು ಕೌತುಕಪ್ರಿಯರಾಗಿದ್ದರು. ನನ್ನನ್ನು ಮಾಧ್ಯಮವಾಗಿರಿಸಿ ಅವರು ಪ್ರೇಮಾನಂದರೊಂದಿಗೆ ಹಾಸ್ಯದಲ್ಲಿ ತೊಡಗುತ್ತಿದ್ದರು. ಒಂದು ದಿನ ನಾನವರ ಕಾಲುಗಳನ್ನು ಒತ್ತುತ್ತಿದ್ದಾಗ ಅವರು ಮೆಲ್ಲನೆ ನನಗೆ ಹೇಳಿದರು, ''ಪಕ್ಕದ ಕೋಣೆಗೆ ಹೋಗಿ ಸೋದರ ಬಾಬುರಾಮನ ಕಾಲುಗಳನ್ನು ಸ್ವಲ್ಪ ಒತ್ತಿ ಬಾ.'' ಸ್ವಾಮಿ ಪ್ರೇಮಾನಂದರು ಇತರರ ಸೇವೆಯನ್ನೆಂದೂ ಸ್ವೀಕರಿಸುತ್ತಿರಲಿಲ್ಲ. ನಾನು ಅವರ ಪಾದಸೇವೆಯನ್ನು ಮಾಡಲು ಹೋದರೆ, ಅವರು ಅದನ್ನು ಸ್ವೀಕರಿಸುವವರಲ್ಲ. ಆದರೆ ಇದು ಮಹಾರಾಜರ ಆಜ್ಞೆಯಾದ್ದರಿಂದ ಇದನ್ನು ಪಾಲಿಸುವುದೇ ಸರಿ ಎಂದು ಬಗೆದ ನಾನು, (ನನಗಾಗ ೧೮ ವರ್ಷ ವಯಸ್ಸು) ಪ್ರೇಮಾನಂದರ ಕೋಣೆಗೆ ಹೋಗಿ ಬಾಗಿಲನ್ನು ತೆರೆದೆ. ಅವರು ಶಾಲನ್ನು ಹೊದ್ದು ತಮ್ಮ ಮಂಚದಲ್ಲಿ ಮಲಗಿದ್ದರು. ನಾನು ಅವರ ಒಂದು ಕಾಲನ್ನು ಒತ್ತತೊಡಗಿದೆ. ಪ್ರೇಮಾನಂದರು ಎಚ್ಚೆತ್ತು, ''ಹೋಗಿಲ್ಲಿಂದ! ನನ್ನ ಕಾಲುಗಳನ್ನು ಒತ್ತಬೇಕಾಗಿಲ್ಲ, ಮಹಾರಾಜರ ಬಳಿಗೆ ಹೋಗು!'' ಎಂದು ಗುಡುಗಿದರು. ಆದರೆ ನಾನು ಅವರ ಮಾತನ್ನು ಕೇಳಲಿಲ್ಲ. ನಾನು ಮತ್ತೆ ಅವರ ಕಾಲನ್ನು ನನ್ನೆಡೆಗೆ ಎಳೆದು ಒತ್ತತೊಡಗಿದೆ. ''ಈ ಕೆಲಸವನ್ನು ಮಾಡಲು ನನಗೆ ಮಹಾರಾಜರು ಹೇಳಿದ್ದಾರೆ'' ಎಂದು ತಿಳಿಸಬಯಸಿದೆ. ಹೀಗೆ ಸ್ವಲ್ಪ ಸಮಯ ಕಳೆಯಿತು. ಪ್ರತಿಸಲವೂ ಅವರು ನಿಷೇಧಿಸುತ್ತಿದ್ದಾರೆ, ನಾನು ಮಹಾರಾಜರ ಆಜ್ಞೆಯನ್ನು ಪಾಲಿಸಬೇಕೆಂದು ಹೇಳುತ್ತಿದ್ದೇನೆ. ಕೊನೆಗೆ ಅವರು ಕಾಲು ಚಾಚಿದರು, ನಾನು ಚೆನ್ನಾಗಿ ಅವರ ಪಾದಸೇವೆ ಮಾಡಿದೆ. ಅವರ ಸೇವೆ ಮಾಡಿದ್ದಕ್ಕೆ ನನ್ನನ್ನು ಆಶೀರ್ವದಿಸಿದರು.

೧೯೧೫ನೆಯ ಇಸವಿಯ ಪ್ರಾರಂಭದಲ್ಲಿ ನಡೆದ ರಾಮಕೃಷ್ಣ ಮಠದ ಟ್ರಸ್ಟಿಗಳ ಒಂದು ಸಭೆಯ ಬಗ್ಗೆ ನೆನಪಾಗುತ್ತಿದೆ. 'ಉದ್ಬೋಧನ'ದಿಂದ ಬಂದಿದ್ದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಶಾರದಾನಂದರು ನನ್ನನ್ನು ಕೇಳಿದರು, ''ಸೋದರ ಬಾಬುರಾಮ ಎಲ್ಲಿ?'' ನಾನೆಂದೆ, ''ಅವರು ಮಹಡಿಯ ಮೇಲೆ, ಮಂದಿರದಲ್ಲಿದ್ದಾರೆ.'' ಅವರು ನಿಧಾನವಾಗಿ ಒಂದೊಂದಾಗಿ ಹೆಜ್ಜೆಯಿಡುತ್ತ ಮೆಟ್ಟಿಲುಗಳೇರಿದಂತೆ, ನಾನೂ ಅವರನ್ನು ಹಿಂಬಾಲಿಸಿದೆ. ಕೋಣೆಯ ಒಂದು ಮೂಲೆಯಲ್ಲಿ ಕುಳಿತು ಸ್ವಾಮಿ ಪ್ರೇಮಾನಂದರು ಧ್ಯಾನಮಗ್ನರಾಗಿದ್ದಾರೆ. ಸ್ವಾಮಿ ಶಾರದಾನಂದರು ದೃಢಕಾಯರೂ, ಬಲವಂತರೂ ಆಗಿದ್ದರು. ಅವರು ತಮ್ಮ ಗುರುಭಾಯಿಯನ್ನು ಎತ್ತಿಕೊಂಡು ಮಹಡಿಯಿಂದಿಳಿದು ನೆಲದಲ್ಲಿರಿಸಿದರು.

ಸ್ವಾಮಿ ಪ್ರೇಮಾನಂದರು ಎದ್ದು ನಿಂತು ಭಾವೋನ್ಮತ್ತರಾಗಿ ನರ್ತಿಸಲಾರಂಭಿಸಿದರು. ಮಹಾರಾಜ್, ತುರೀಯಾನಂದ, ಶಿವಾನಂದ ಹಾಗೂ ಸುಬೋಧಾನಂದ ಮೊದಲಾದ ಸ್ವಾಮಿಗಳು ನರ್ತನದಲ್ಲಿ ಪಾಲ್ಗೊಂಡರು. ಮಹಾರಾಜರು ನಡುವಿನಲ್ಲಿದ್ದರೆ, ಗುರುಭಾಯಿಗಳೆಲ್ಲ ಅವರ ಸುತ್ತಲೂ ನರ್ತಿಸಿದರು. ಸನ್ನಿವೇಶವು ಅಧ್ಯಾತ್ಮ ಭಾವದಿಂದ ಸ್ಪಂದಿಸತೊಡಗಿತು. ಸುಮಾರು ಒಂದು ಗಂಟೆ ಅವರು ನೃತ್ಯ-ಗಾಯನಗಳಲ್ಲಿ ಮಗ್ನರಾಗಿದ್ದರು. ಆ ದೃಶ್ಯವು, ಸಮಗ್ರ ಮಾನವ ಜಾತಿಯನ್ನೇ ಮುಕ್ತಭಾವದಿಂದ ಭಗವದಾನಂದದಲ್ಲಿ ಭಾಗವಹಿಸಲು ಅವರು ಆಮಂತ್ರಿಸುತ್ತಿದ್ದರೋ ಎಂಬಂತಿತ್ತು.

ಕಾಶಿಗೆ ಹೋಗುವಾಗ ನಾನು ರಾಜಾ ಮಹಾರಾಜರಿಗಾಗಿ ಎರಡು ಬಾಟಲಿ ವೆಲ್ಶ್ ದ್ರಾಕ್ಷಾರಸವನ್ನು ಕೊಂಡೊಯ್ದಿದ್ದೆ. ಈ ದ್ರಾಕ್ಷಾರಸವನ್ನು ನೋಡಿ ಮಹಾರಾಜರು ಒಂದು ಗ್ಲಾಸನ್ನು ತರಲು ಹೇಳಿ, ಅದರಲ್ಲಿ ಅದನ್ನು ಸುರಿದು ನನಗೆಂದರು, ''ಹೋಗು, ಈ ಗ್ಲಾಸನ್ನು ಅದ್ವೈತ ಆಶ್ರಮದಲ್ಲಿ ಪ್ರೇಮಾನಂದರಿಗೆ ಕೊಡುತ್ತ ಹೀಗೆ ಹೇಳು, 'ಮಹಾರಾಜ್, ನಿಮಗಾಗಿ ನಾನು ಕಲ್ಕತ್ತದ ಶ್ರೇಷ್ಠತಮ ಮದ್ಯವನ್ನು ತಂದಿದ್ದೇನೆ' ಅಂತ.'' ರಾಜಾ ಮಹಾರಾಜರು ಹೇಳಿದಂತೆಯೆ ನಾನು ಆ ಗ್ಲಾಸನ್ನು ಹಿಡಿದು ಬಾಬುರಾಮ ಮಹಾರಾಜರ ಬಳಿಸಾರಿದೆ. ಅವರೆಂದರು, ''ನಡಿ ಇಲ್ಲಿಂದ! ಇಲ್ಲಿಂದ ಹೊರಟುಹೋಗು!'' ಆದರೆ ನಾನು ಬಿಡಲಿಲ್ಲ. ಅವರು ಕುರ್ಚಿಯಿಂದೆದ್ದು ಹೊರಟರು. ನಾನು ಅವರ ಹಿಂದೆ. ಅವರು ತೋಟದ ಅಂಚನ್ನು ತಲುಪಿದಾಗ, ರಾಜಾ ಮಹಾರಾಜರು ಅಲ್ಲಿಗೆ ಬಂದರು. ಬಳಿಕ, ''ಬಾಬುರಾಮ ದಾ (ಅಣ್ಣ), ಅದನ್ನು ಕುಡಿದರೆ ತೊಂದರೆಯೇನು? ಅವನು ನಿನಗಾಗಿ ಕಲ್ಕತ್ತದಿಂದ ದ್ರಾಕ್ಷಾರಸವನ್ನು ತಂದಿದ್ದಾನೆ.'' ಪ್ರೇಮಾನಂದರು ಹೇಳಿದರು, ''ಓಹೋ! ಹಾಗೆಂದೇನೂ ಅವನು ನನಗೆ ಹೇಳಲಿಲ್ಲವಲ್ಲ!'' ಹೀಗೆ ಮಹಾರಾಜರು ತಮ್ಮ ಗುರುಭಾಯಿಗಳೊಂದಿಗೆ ವಿನೋದದಲ್ಲಿ ತೊಡಗುತ್ತಿದ್ದರು.

### ಸ್ವಾಮಿ ತುರೀಯಾನಂದರ ಸ್ಮೃತಿ:

೧೯೧೨ರಲ್ಲಿ ಸ್ವಾಮಿ ಬ್ರಹ್ಮಾನಂದರು ಕಂಖಲ್‌ನಲ್ಲಿ ದುರ್ಗಾಪೂಜೆಯನ್ನು ಆಯೋಜಿಸಿದರು. ನಾನು ದುರ್ಗಾಪೂಜೆಯ ರಜೆಯಲ್ಲಿ ಕಂಖಲ್‌ಗೆ ಹೋದಾಗ ಅಲ್ಲಿ ಸ್ವಾಮಿ ತುರೀಯಾನಂದರನ್ನು ಭೇಟಿಯಾದೆ. ಕಂಖಲ್‌ನಿಂದ ಹಿಂದಿರುಗುವಾಗ ರಾಜಾ ಮಹಾರಾಜರ ನಿರ್ದೇಶನದಂತೆ ಬೃಂದಾವನಕ್ಕೆ ಹೋದೆ, ಹಾಗೂ ಸ್ವಾಮಿ ತುರೀಯಾನಂದರ ಪರಿಚಿತರಾದ ಒಬ್ಬ ವೈಷ್ಣವ

ಸಾಧುಗಳ ಬಗ್ಗೆ ವಿಚಾರಿಸಿದೆ. ಅವರು ಕಾಡಿನ ಮಧ್ಯೆ ಒಂದು ಕುಟೀರದಲ್ಲಿ ವಾಸಿಸುತ್ತಿದ್ದರು. ನಾನು ಕಿರಿದಾದ ರಸ್ತೆಯನ್ನು ಹಿಡಿದು ಈ ಸಾಧುಗಳ ಕುಟೀರಕ್ಕೆ ಹೋದೆ. ಸಾಧುಗಳು ಕುಟೀರದಿಂದ ಹೊರಬಂದು ದರ್ಶನ ನೀಡಿದರು. ಅವರ ಶಿಷ್ಯರು ಅವರಿಗಾಗಿ ಚಾಪೆಯನ್ನು ಹಾಸಿ, ನನಗೂ ಅದರ ಮೇಲೆ ಕುಳಿತುಕೊಳ್ಳುವಂತೆ ಇಂಗಿತ ಮಾಡಿದರು. ಈ ಸಾಧುಗಳ ಸಾನ್ನಿಧ್ಯದಲ್ಲಿ ನಾನು ಗಾಢವಾದ ಆಧ್ಯಾತ್ಮಿಕತೆಯನ್ನು ಅನುಭವಿಸಿದೆ. ಅವರಿಗೆ ಪ್ರಣಾಮ ಮಾಡುತ್ತ ಕೇಳಿದೆ, ''ಮಹಾರಾಜ್, ಈ ಉಚ್ಚ ಅವಸ್ಥೆಯನ್ನು ಹೇಗೆ ಪಡೆದಿರಿ?'' ಅವರು ಒಂದೇ ಮಾತಿನಲ್ಲಿ ನನ್ನ ಪ್ರಶ್ನೆಗೆ ಉತ್ತರಿಸಿದರು, ''ನಾಮದಿಂದ.'' ಅರ್ಥಾತ್ ಭಗವಂತನ ನಾಮಜಪವನ್ನು ಮಾಡುತ್ತ ಅವರು ಸಿದ್ಧಿಯನ್ನು ಪಡೆದಿದ್ದರು.

೧೯೧೪ರಲ್ಲಿ ನಾನು ಕಾಶಿಗೆ ಹೋಗಿದ್ದು ಅಲ್ಲಿ ಸ್ವಾಮಿ ತುರೀಯಾನಂದರ ಸಾನ್ನಿಧ್ಯದಲ್ಲಿ ಬ್ರಹ್ಮಸೂತ್ರದ ಶಂಕರ ಭಾಷ್ಯವನ್ನು ಅಧ್ಯಯನ ಮಾಡಿದೆ. ಬ್ರಹ್ಮ ಹಾಗೂ ಮಾಯೆಯ ಬಗ್ಗೆ ಹರಿ ಮಹಾರಾಜರೊಂದಿಗೆ ನಾನು ತರ್ಕ ಮಾಡುತ್ತಿದ್ದೆ. ನನ್ನ ಮೆದುಳು ಪಾಶ್ಚಾತ್ಯ ದರ್ಶನದ ವಿಚಾರಗಳಿಂದ ತುಂಬಿಹೋಗಿತ್ತು. ಅವರ ತರಗತಿಗಳಲ್ಲಿ ನಾನು ಪಾಶ್ಚಾತ್ಯ ದರ್ಶನದ ಉಕ್ತಿಗಳನ್ನು ಎತ್ತಿ ಹಿಡಿದು ಆ ದಾರ್ಶನಿಕರ ದೃಷ್ಟಿಕೋನವನ್ನು ಉಲ್ಲೇಖಿಸುತ್ತಿದ್ದೆ. ಆದರೆ ರಾಜಾ ಮಹಾರಾಜರೊಂದಿಗೆ ಎಂದೂ ತರ್ಕ ಮಾಡುತ್ತಿರಲಿಲ್ಲ. ಇತರ ತರುಣ ಸಾಧುಗಳು ನನ್ನನ್ನು ತಲೆಹರಟೆಯೆಂದು ಬಗೆದಿದ್ದರು. ಆದರೆ ಹರಿ ಮಹಾರಾಜರೆಂದಿಗೂ ಹಾಗೆಂದುಕೊಂಡವರಲ್ಲ. ಮಾತ್ರವಲ್ಲ, ಅವರು ನನ್ನನ್ನು ಪ್ರೋತ್ಸಾಹಿಸುತ್ತಿದ್ದರು ಕೂಡ.

ನಂತರ ನಾನೊಮ್ಮೆ ಕಲ್ಕತ್ತೆಗೆ ಹೋದಾಗ ಅಚಲಾನಂದರು ಹರಿ ಮಹಾರಾಜರಿಗಾಗಿ ಅದೆಷ್ಟೋ ಎಳನೀರುಗಳನ್ನು ಕಳುಹಿಸಲು ಹೇಳಿದರು. ನಾನು ಎಳನೀರುಗಳನ್ನು ಕಳುಹಿಸಿದೆ. ಅವುಗಳು ತಲುಪಿದಾಗ ಅಚಲಾನಂದರು ಬರೆದರು : '' 'ಈಗ ಕ್ಲಾಸುಗಳು ಅಷ್ಟೊಂದು ಉತ್ತೇಜನಾಪೂರ್ಣವಾಗಿಲ್ಲ, ಏಕೆಂದರೆ ಹುಮ್ಮಸ್ಸಿನಿಂದ ತರ್ಕ ಮಾಡುವವರು ಈಗ ಯಾರೂ ಇಲ್ಲವೆಂದು ಬರೆ' ಎಂದು ನನಗೆ ಹೇಳಿದ್ದಾರೆ.''

ಮತ್ತೊಮ್ಮೆ ಭಗವದ್ಗೀತೆಯನ್ನು ಹೇಗೆ ಅಧ್ಯಯನ ಮಾಡುವುದೆಂದು ತಿಳಿದುಕೊಳ್ಳಲು ಕಾಶಿಯಲ್ಲಿ ಸ್ವಾಮಿ ತುರೀಯಾನಂದರ ಬಳಿಸಾರಿದೆ. ''ನಾಳೆ ಬಾ'' ಎಂದರು. ಮರುದಿನ ಅವರ ಬಳಿ ಹೋದಾಗ ಅವರೆಂದರು, ''ಗೀತೆಯ ಒಂದು ಶ್ಲೋಕವನ್ನು ಆರಿಸಿಕೊ. ಅದನ್ನು ಬಾಯಿಪಾಠ ಮಾಡು. ಅದರ ಪ್ರತಿಯೊಂದು ಶಬ್ದದ ಅರ್ಥವನ್ನು ತಿಳಿದುಕೊ. ಈ ಶ್ಲೋಕವನ್ನು ಧ್ಯಾನಿಸು. ಒಂದು ವಾರ ಈ ಶ್ಲೋಕವನ್ನು ನಿನ್ನ ಜೀವನದಲ್ಲಿ ಅಭ್ಯಾಸ ಮಾಡು. ಅದಾದ ನಂತರ ಮುಂದಿನ ಶ್ಲೋಕವನ್ನು ನಿನ್ನ ಜೀವನದಲ್ಲಿ ಅಭ್ಯಾಸ ಮಾಡು. ಅದಾದ ನಂತರ ಮುಂದಿನ ಶ್ಲೋಕವನ್ನು ತೆಗೆದುಕೊ. ನಾನು ಗೀತೆಯನ್ನು ಈ ರೀತಿ ಅಧ್ಯಯನ ಮಾಡಿರುವೆ. ಇದೇ ನಿನಗೆ ನಾನು ಮಾಡುವ ಮೊದಲ ಹಾಗೂ ಕೊನೆಯ ತರಗತಿ.''



ಸ್ವಾಮಿ ತುರೀಯಾನಂದರು

ಒಂದು ದಿನ ಕಾಶಿಯ ಅದ್ವೈತ ಆಶ್ರಮದಲ್ಲಿ ಒಬ್ಬ ಸಾಧುಗಳು ಭಾಗವತದ ವ್ಯಾಖ್ಯಾನ ಮಾಡುತ್ತಿದ್ದರು. ಸ್ವಾಮಿ ಪ್ರೇಮಾನಂದ, ಸ್ವಾಮಿ ತುರಿಯಾನಂದ, ಸ್ವಾಮಿ ಆತ್ಮಾನಂದ ಹಾಗೂ ಇತರ ಸಾಧುಗಳು ಕಾರ್ಪೆಟ್‌ನಲ್ಲಿ ಕುಳಿತು ಕೇಳಿಸಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಒಬ್ಬ ಭಕ್ತ ಮಹಿಳೆಯು ಒಂದು ಕಾರ್ಪೆಟ್‌ನ ಒಂದೆಡೆ ಕುಳಿತರು. ಆತ್ಮಾನಂದರು ತಕ್ಷಣ ಅಲ್ಲಿಂದೆದ್ದರು. ನಂತರ ಪ್ರವೀಣ ಸಾಧುಗಳು ಅದಕ್ಕೆ ಕಾರಣವನ್ನು ತಿಳಿಯಬಯಸಿದಾಗ ಆತ್ಮಾನಂದರು ಹೇಳಿದರು, ''ಸ್ತ್ರೀಯರೊಂದಿಗೆ ಒಂದೇ ಆಸನದಲ್ಲಿ ಕುಳಿತುಕೊಳ್ಳುವುದು ಸಾಧುಗಳಿಗೆ ನಿಷಿದ್ಧ'' ಪ್ರೇಮಾನಂದ ಹಾಗೂ ತುರೀಯಾನಂದ ಸ್ವಾಮಿಗಳು ಅದೇ ಆಸನದಲ್ಲಿ ಕುಳಿತಿದ್ದರಲ್ಲ! ಎಂದಾಗ ಅವರು ಹೇಳಿದರು: ''ಅವರು ಮಹಾಪುರುಷರು – ಪರಮಹಂಸರು! ಬಾಬುರಾಮ ಮಹಾರಾಜರು ಹಾಗೂ ಹರಿಮಹಾರಾಜರು ಒಂದೊಂದು ಚಿಟಿಕೆಯಲ್ಲಿ ನನ್ನಂತಹ ಮೂರ್ಖರಿಗೆ ಬ್ರಹ್ಮಜ್ಞಾನವನ್ನು ನೀಡಬಲ್ಲರು. ನನ್ನನ್ನು ಅವರೊಂದಿಗೆ ಹೋಲಿಸುವುದು ಉಚಿತವಲ್ಲ.''

*(ಮುಂದುವರಿಯುವುದು)*

**ಜೀ**ವನದಲ್ಲಿ ಗಂಡಾಂತರ, ಅದೃಶ್ಯ ಕೊರಕಲು ಬಂಡೆಗಳು ತುಂಬಿವೆ. ಭಗವಂತನ ಕೃಪೆಯ ಸಹಾಯವಿಲ್ಲದೆ ಹೋದರೆ ನಮ್ಮ ಹಡಗು ಅಲ್ಲೇ ಪುಡಿಪುಡಿಯಾಗಿ ಮುಳುಗಿ ಹೋಗುವುದು. ನಾವು ಅವನಲ್ಲಿ ನೆಲೆಸದೆ ಹೋದರೆ, ಅವನ ಕೃಪೆಗಾಗಿ ನಾವು ಹೇಗೆ ಬೇಡಬಲ್ಲೆವು? ನಮ್ಮ ಆಲೋಚನೆಗಳು ಸದಾ ಅವನನ್ನು ಕುರಿತು ಚಿಂತಿಸದೆ ಹೋದರೆ, ನಾವು ಹೇಗೆ ಅವನಲ್ಲಿ ನೆಲೆಸಬಲ್ಲೆವು? ನಾವು ಅವನ ಸಾನ್ನಿಧ್ಯದಲ್ಲಿ ಇರುವ ಪವಿತ್ರ ಅಭ್ಯಾಸವನ್ನು ನಾವು ರೂಢಿಸಿಕೊಳ್ಳದಿದ್ದರೆ, ನಮ್ಮ ಜೀವನದ ಪ್ರತಿ ಕ್ಷಣಗಳಲ್ಲಿ ನಮಗೆ ಅತಿ ಅಗತ್ಯವಾಗಿರುವ ಅವನ ಕೃಪೆಗಾಗಿ ನಾವು ಪ್ರಾರ್ಥಿಸದಿದ್ದರೆ, ಅವನು ನಮ್ಮ ಆಲೋಚನೆಗಳಲ್ಲಿ ಹೇಗೆ ಇರಬಲ್ಲನು? — *ಬ್ರದರ್ ಲಾರೆನ್ಸ್*